# ನಾವು ಮಹಾತ್ಮನನ್ನು ಮರೆಯುತ್ತಿದ್ದೇವೆಯೇ...

**ಗಾ**ಂಧೀಜಿ ಸತ್ತಾಗ ನಿಗೂಢವಾದ ಆದರೆ ತಬ್ಬಿಬ್ಬುಗೊಳಿಸುವ ಹೇಳಿಕೆಯನ್ನು ಬರ್ನಾರ್ಡ್ ಷಾ ನೀಡಿದರು : "ಒಳ್ಳೆಯ ಮನುಷ್ಯನಾಗಿರುವುದು ಅತ್ಯಂತ ಅಪಾಯಕಾರಿ!" ಷಾ ಅವರ ಹೇಳಿಕೆಯನ್ನು ಗಂಭೀರವಾಗಿ ಹಾಗೆಯೇ ಗ್ರಹಿಸಿದರೆ ನಮ್ಮಲ್ಲಿ ಅನೇಕರು ಒಳ್ಳೆಯರಾಗುವುದನ್ನೇ ನಿಲ್ಲಿಸಿಬಿಟ್ಟೇವು. ನಾವೆಲ್ಲರೂ ನಮ್ಮದೇ ರೀತಿಯಲ್ಲಿ ಒಳ್ಳೆಯವರಾಗಿದ್ದೇವೆ. ನಾವು ತೆರಿಗೆ ಕಟ್ಟುತ್ತೇವೆ, ನಿತ್ಯ ಪ್ರಾರ್ಥನೆ ಮಾಡುತ್ತೇವೆ, ದೇವಾಲಯ, ಚರ್ಚು, ಮಸೀದಿಗಳಿಗೆ ಹೋಗುತ್ತೇವೆ. ನಾವು ಕಾನೂನಿಗೆ ವಿಧೇಯರಾಗಿದ್ದೇವೆ. ಕೆಲವು ಸಾರಿ ನಮ್ಮ ಅನುಕೂಲಕ್ಕೆ ತಕ್ಕಂತೆ ಅದನ್ನು ತಿರುಚುತ್ತೇವೆ. ರಸ್ತೆ ನಿಯಮಗಳನ್ನು ಪಾಲಿಸುತ್ತೇವೆ. ಪ್ರಯಾಣ ಮಾಡುವಾಗ ವೃದ್ಧಸ್ತ್ರೀ ಪುರುಷರಿಗೆ ಸ್ಥಳ ಕೊಡದಿದ್ದರೂ ಯುವತಿಯರು, ಹೆಂಗಸರಿಗಂತೂ ಸ್ಥಳ ಕೊಡುತ್ತೇವೆ. ನಮ್ಮ ಶಿಕ್ಷಕರು ವಿದ್ಯಾರ್ಥಿಗಳನ್ನು ಪಾಸು ಮಾಡುವುದರಲ್ಲಿ, ಮಾರ್ಕ್ಸ್ ಕೊಡುವುದರಲ್ಲಿ ಸಾಕಷ್ಟು ಧಾರಾಳವಾಗಿದ್ದು ಒಳ್ಳೆಯವರೇ ಆಗಿರುತ್ತಾರೆ. ಹೀಗೆ ಸಾವಿರಾರು ರೀತಿಯಲ್ಲಿ ನಾವು ಅಪಾಯಕ್ಕೆ ಸಿಕ್ಕಿಕೊಳ್ಳದೆ ಉಪಾಯವಾಗಿ ಒಳ್ಳೆಯವರಾಗಿರುತ್ತೇವೆ. ಒಳ್ಳೆಯವರಾಗದಿದ್ದರೂ ನಮ್ಮ ಸುರಕ್ಷತೆಯನ್ನು ಪಣಕ್ಕೊಡ್ಡುವುದಿಲ್ಲ. ನಮ್ಮ ಪ್ರತಿನಿತ್ಯದ ವ್ಯವಹಾರಗಳಲ್ಲೂ ಒಳ್ಳೆಯವರಾಗಿರುತ್ತೇವೆ. ಏಕೆಂದರೆ ಅದು ಸುಲಭ, ಅನುಕೂಲ ಹಾಗೂ ಅನೇಕ ಪ್ರತಿಫಲಗಳನ್ನು ತಂದುಕೊಡುತ್ತದೆ. ನಾವು ಕಾನೂನಿನ ಕಪಿಮುಷ್ಟಿಯಲ್ಲಿ ಸಿಕ್ಕಿ ಬೀಳುವುದಿಲ್ಲ. ನಮ್ಮ ಸತ್ಕೀರ್ತಿಗೆ ಧಕ್ಕೆ ತಂದುಕೊಳ್ಳುವುದಿಲ್ಲ. ಬಹಳ ಸಭ್ಯರು ಎಂದು ಹೊರಗಡೆ ತೋರಿಸಲೂ ಬಹುದು.

> ಮುಂದಿನ ಪೀಳಿಗೆಯವರು ಇಂತಹ (ಗಾಂಧಿಯಂತಹ) ವ್ಯಕ್ತಿ ಈ ಭೂಮಿಯಲ್ಲಿ ಬಾಳಿ, ನಡೆದಾಡಿದ್ದ ಅಂದರೆ ನಂಬಲಿಕ್ಕಿಲ್ಲ.
>
> —ಐನ್‌ಸ್ಟೈನ್

ಗಾಂಧೀಜಿ ಬಹಳ ಭಿನ್ನವಾಗಿ ಬೇರೆಯಾಗಿದ್ದರು. ಒಳ್ಳೆಯವರಾಗುವುದಕ್ಕೆ ಎರಡು ರೀತಿಗಳಿವೆ. ನಮಗೆ ತಕ್ಷಣಕ್ಕೆ ಸಂಬಂಧಪಡುವ ವಿಚಾರಗಳಲ್ಲಿ ಒಳ್ಳೆಯರಾಗುವುದು ಒಂದು ರೀತಿಯದಾದರೆ ಇನ್ನೊಂದು ಸರ್ವಜನರಿಗೂ ಒಳ್ಳೆಯದಾಗಲಿ ಎಂದು ಪರಿಶ್ರಮ ಪಡುವುದು. ಆ ಪ್ರಕ್ರಿಯೆಯಲ್ಲಿ ದುರ್ಜನರ ಸವಾಲನ್ನು ಎದುರಿಸಿ ಸಂಪನ್ನರ ಹಕ್ಕುಗಳಿಗಾಗಿ ಹೋರಾಡುವುದು ಒಂದು. ಇಲ್ಲಿ ಗಾಂಧೀಜಿ ಚುರುಕಾಗಿ ಶಕ್ತಿಯುತರಾಗಿರುತ್ತಿದ್ದರು. ಅವರು ದೊಡ್ಡ ದೊಡ್ಡ ಸಾಂಸ್ಥಿಕ ಮಟ್ಟಗಳಲ್ಲಿ ಈ ಸಂಘರ್ಷ ಎದುರಿಸಬೇಕಾಗುತ್ತಿತ್ತು. ಉದಾ: ದಕ್ಷಿಣ ಆಫ್ರಿಕಾದಲ್ಲಿ ಬಿಳಿಯರ ಸರ್ಕಾರದ ವಿರುದ್ಧ ಹೋರಾಟ, ಭಾರತದಲ್ಲಿ ಚಂಪಾರಣ್ಯ ರೈತರಿಗೆ ಜಮೀನುದಾರರಿಂದ ಆಗುತ್ತಿದ್ದ ಅನ್ಯಾಯದ ವಿರುದ್ಧ ಹೋರಾಟ, ಇತ್ಯಾದಿ. ಅವರು ಅನೇಕ ಸಾರಿ ವ್ಯಕ್ತಿಗಳನ್ನಲ್ಲದೆ ವಿದೇಶಿ ಸರ್ಕಾರ, ಜಾತಿ ಪದ್ಧತಿ, ಸಾಮಾಜಿಕ ಅನ್ಯಾಯ, ಧಾರ್ಮಿಕ ಧರ್ಮಾಂಧತೆ, ಪಟ್ಟಭದ್ರಹಿತಾಸಕ್ತಿಗಳು ಇತ್ಯಾದಿಗಳನ್ನು ಎದುರಿಸಿ ಹೋರಾಡಬೇಕಾಗುತ್ತಿತ್ತು. ಅದು ಮಹಾಕಾವ್ಯಗಳಲ್ಲಿನ ಹೋರಾಟದಂತೆ ನಡೆದರೂ ಇಲ್ಲಿ ಒಬ್ಬ ದೈಹಿಕವಾಗಿ ದುರ್ಬಲನಾದ ಬಡಪಾಯಿ ಮತ್ತು ದೊಡ್ಡ ದೊಡ್ಡ ಸಂಘಶಕ್ತಿಗಳ ನಡುವೆ ಹೋರಾಟವಿರುತ್ತಿತ್ತು. ಆತನು ಉಪಯೋಗಿಸುತ್ತಿದ್ದ ಅಸ್ತ್ರಗಳಾದರೂ ಯಾವುವು? ಸೈಕಲ್ ಚೈನುಗಳು, ಸೋಡಾ ಬಾಟಲ್‌ಗಳು, ಸುಲಭವಾಗಿ ಸಿಗುವ ಕಲ್ಲುಗಳಲ್ಲ, ಬದಲಿಗೆ ನೈತಿಕ ಶಸ್ತ್ರಾಸ್ತ್ರಗಳನ್ನು ಗಾಂಧಿ ಬಳಸುತ್ತಿದ್ದರು.

ಅವರ ನೈತಿಕ ಶಸ್ತ್ರಗಳ ಉಗ್ರಾಣದಲ್ಲಿ ಕರುಣಾಭರಿತ ಪ್ರೇಮ, ನೈತಿಕ ಶಕ್ತಿ, ಸಹನೆ, ತ್ಯಾಗಗಳಲ್ಲದೆ ಸ್ವಯಂ ವಿಶ್ಲೇಷಣೆ ಮತ್ತು ಸ್ವಯಂ ಟೀಕೆ, ತಪ್ಪೊಪ್ಪಿಗೆ ಇರುತ್ತಿದ್ದವು. ಜೊತೆಗೆ ಆತ್ಮಸಾಕ್ಷಿಯಂತೆ ನಡೆಯುವಿಕೆ, ತತ್ತ್ವಗಳ ಆಚರಣೆ, ದೇವರಲ್ಲಿ ನಂಬಿಕೆ ಇರುತ್ತಿದ್ದವು. ಅವರು ದುಷ್ಟತನವನ್ನು ದುಷ್ಟತನದಿಂದ ಎದುರಿಸಲಿಲ್ಲ. ಬದಲಿಗೆ ದ್ವೇಷವನ್ನು ಒಳ್ಳೆಯತನದಿಂದ ಪ್ರೇಮದಿಂದ ಎದುರಿಸಿದರು. ದೈಹಿಕ ದಂಡನೆಯು ಶಿಕ್ಷೆಯ ಭಯದಿಂದ ಪ್ರೇರೇಪಿತವಾದರೆ ನೈತಿಕ ಒತ್ತಾಯದಲ್ಲಿ ಯಾವ ಶಿಕ್ಷೆಯನ್ನೂ ಹೇರುವುದಿಲ್ಲ. ಅದು ಸ್ವತಃ ನೋವನ್ನು ಅನುಭವಿಸಿ, ದುಷ್ಟತನವನ್ನು ಪ್ರೇಮ ಮತ್ತು ಕ್ಷಮೆಯಿಂದ ಪರಿವರ್ತಿಸುತ್ತದೆ. ಆದ್ದರಿಂದಲೇ ಮಿಲಿಟರಿ ನಾಯಕ ನಮ್ಮ ಭಯವನ್ನು ಆಳಿದರೆ ನೈತಿಕ ನೇತಾರ ನಮ್ಮ ಗೌರವವನ್ನು ಸಂಪಾದಿಸುತ್ತಾನೆ. ನೈತಿಕ ನೇತಾರ ಶಾಂತಿಯ ಮಹಾಬೆಳಕನ್ನು ನಮ್ಮ ಬಾಳಿನಲ್ಲಿ ಬೆಳಗಿಸುತ್ತಾನೆ. ಗಾಂಧೀಜಿ ಟಾಲ್‌ಸ್ಟಾಯ್, ಎಮರ್ಸನ್‌ರಂತಹವರ ಸಾಲಿನಲ್ಲಿ ನಿಲ್ಲುವ ನೈತಿಕ ನೇತಾರರಾಗಿದ್ದರು.

ಅವರು ಅದೃಶ್ಯದ, ಎಂದೂ ತಪ್ಪಾಗದ ಆತ್ಮಶಕ್ತಿಯನ್ನು ಬಳಸಿಕೊಂಡರು. ಅವರು ಧರ್ಮದ ಲಂಗರುವಿನ ಮೇಲೆ ಬಾಳನ್ನು ರೂಪಿಸಿಕೊಂಡಿದ್ದರು. ಆದರೆ ನಮಗೆ ಸತ್ಯದ ಸರ್ಜನ್‌ರಾಗಿದ್ದ ಗಾಂಧಿಯವರಿಂದ ನಮ್ಮ ರೋಗಕ್ಕೆ ಚಿಕಿತ್ಸೆ ಮಾಡಿಸಿಕೊಂಡು ಸಹಿಸಿಕೊಳ್ಳಲಾಗಲಿಲ್ಲ. ನಮ್ಮ ಸಮಾಜ ಬದಲಾಗುವುದು ಬಹಳ ಕಷ್ಟ. ನಮ್ಮ ಕೆಟ್ಟ ಪರಂಪರೆ ಸಂಪ್ರದಾಯಗಳು ಸಾಯುವುದು ಕಷ್ಟ. ನಮ್ಮ ಯೋಚನಾ ರೀತಿಗಳನ್ನು ಕ್ರಾಂತಿಕಾರಕವಾಗಿ ಬದಲು ಮಾಡಲು ಪ್ರಯತ್ನಿಸುವ ಅಪರೂಪದ ಅಪವಾದವನ್ನು ಸಹಿಸುವುದಿಲ್ಲ. ಗಾಂಧಿ ಅಹಿಂಸೆ ಬೇಡಿದರೆ ಆತನನ್ನು ಹಿಂಸೆಯಿಂದ ಕೊಂದೆವು.

ಗಾಂಧೀಜಿಯ ಕತೆ ಕ್ರಿಸ್ತ ಮತ್ತು ಸಾಕ್ರೆಟೀಸರ ಕತೆಯ ಪುನರ್ ನಿರೂಪಣೆ. ಅಹಿಂಸಾ ಮತ್ತು ಪ್ರೇಮಮೂರ್ತಿಯನ್ನು ದ್ವೇಷ ಮತ್ತು ಹಿಂಸೆಯಿಂದಲೇ ಮುಗಿಸಿ ಹಲವು ಲಕ್ಷ ಅಮಾಯಕರ ಸಾವಿಗೆ (ದೇಶ ಇಬ್ಭಾಗವಾಗುವಾಗ) ಕಾರಣೀಭೂತರಾದೆವು. ತನ್ನ ಆಕಾಶದಂತಹ ವೈಶಾಲ್ಯತೆಗಾಗಿ, ನಾವೆಲ್ಲರೂ ಸಹೋದರರು ಎಂಬ ಭಾವನೆಯ ಉಳಿವಿಗಾಗಿ ತನ್ನ ಜೀವನವನ್ನೆ ತೆರಬೇಕಾಯಿತು. ಅವರ ಸಾವಿನ ರೀತಿಯೆ ಗಾಂಧಿ ಜೀವನ ವಿಧಾನದ ಗೆಲುವು.

ಗಾಂಧಿ ಈಗಿಲ್ಲ—ಆದರೆ ಅವರು ನಿಮ್ಮಲ್ಲಿ ಹಾಗೂ ನನ್ನಲ್ಲಿ ಇದ್ದಾರೆ. ಗಾಂಧೀವಾದ, ಒಣ ಅಪ್ರಸ್ತುತ ಅಪ್ರಾಯೋಗಿಕ ಸಿದ್ಧಾಂತವಲ್ಲ. ಅದು ಸಾಧನೆಯನ್ನು ಪ್ರತ್ಯಕ್ಷೀಕರಣಗೊಳಿಸುವ ಶಿಸ್ತಿನ ಜೀವನ ವಿಧಾನ. ಅದು ಬಾಹ್ಯದಲ್ಲಿಲ್ಲ. ಅದೊಂದು ಮನೋಭಾವ, ಮನಸ್ಥಿತಿಯ ಜೀವನ ವಿಧಾನದ ಪ್ರತೀಕ. ಗಾಂಧೀ ತತ್ತ್ವಗಳು ಸೂರ್ಯ ಚಂದ್ರರ ತರಹ ಎಲ್ಲ ದಿಕ್ಕುಗಳಿಂದಲೂ ನಮ್ಮ ಜೀವನಕ್ಕೆ ಬೆಳಕು ಹಾಯಿಸುವಂತಹವಾಗಿವೆ. ಸೂರ್ಯ ಚಂದ್ರರಿಗೆ ಮೋಡ ಮುಚ್ಚಬಹುದು, ಗ್ರಹಣಗಳು ಹಿಡಿಯಬಹುದು. ಆದರೂ ಅದೆಲ್ಲ ತಾತ್ಕಾಲಿಕ. ಪ್ರಕಾಶ ಮಾತ್ರ ಸಾರ್ವಕಾಲಿಕ. ಹಾಗೆಯೇ ಸತ್ಯದ ಬೆಳಕು ನೀತಿ ಮತ್ತು ವಿವೇಕ ಕತ್ತಲೆಯ ಕೋಳೆಯಲ್ಲಿ ಬಿದ್ದರೂ ಮತ್ತೆ ಬೆಳಗುವುದಂತೂ ಖಂಡಿತ.

ನಾವು, ಜನಸಾಮಾನ್ಯರು ಗಾಂಧಿಯ ಮೇರುಪುರುಷ ವ್ಯಕ್ತಿತ್ವಕ್ಕೆ ಏರಲಾಗದಿರಬಹುದು. ಆದರೆ ನಾವು ಸಣ್ಣ-ಪುಟ್ಟ ಮೊಂಬತ್ತಿಗಳಾಗಿ ಇನ್ನಿತರೆ ಚಿಕ್ಕ-ಪುಟ್ಟ ಮೊಂಬತ್ತಿಗಳನ್ನು ಬೆಳಗಿಸುತ್ತಾ ನಮ್ಮ ಸಂಕುಚಿತತೆ ಮೀರಿ ವಿಶಾಲವಾಗುವ ಪ್ರಯತ್ನ ಮಾಡಬೇಕು. ನಮ್ಮ ಚಿಕ್ಕ-ಪುಟ್ಟ, ಅನಾಮಧೇಯ, ಯಾರೂ ನೆನೆಯದ, ಸಣ್ಣ ಸಣ್ಣ ಪ್ರೇಮಪೂರಿತ ನಡವಳಿಕೆ, ಕರುಣೆಯ ಕೆಲಸಗಳು, ನಾವೆಲ್ಲರೂ ಒಂದೆನ್ನುವ ಉತ್ಸಾಹದ ಮಾತುಗಳು ಅಗತ್ಯವಿದ್ದೆಡೆ ಖಂಡಿತಾ ಉಪಯೋಗಿ ಹಾಗೂ ಸಹಕಾರಿಯಾಗುತ್ತವೆ. ಪ್ರಸ್ತುತ ಬಿನ್ ಲಾಡೆನ್ ಸೃಷ್ಟಿಸಿದ ವಿಶ್ವ ಬಿಕ್ಕಟ್ಟು ನಮ್ಮ ನಮ್ಮಲ್ಲೆ ಒಡಕು ಮೂಡಿಸುವಂತಿದ್ದು, ಈ ಬಿಗುವು ನಿವಾರಣೆಗೆ ನಮ್ಮ ಸಣ್ಣ-ಪುಟ್ಟ ಶಾಂತಿಯ ಮಾತುಗಳ ನಡವಳಿಕೆಯ ಅಗತ್ಯ ಖಂಡಿತ ಇದೆ. ಎಲ್ಲ ದ್ವೇಷ ಮತ್ತು ಕ್ರೌರ್ಯಗಳು ಮೃತ್ಯುಸಮಾನ. ಇವನ್ನು ತಾಳ್ಮೆಯಿಂದ ಎದುರಿಸಬೇಕು. ಈ ನೈತಿಕ ಶಕ್ತಿಯನ್ನು ನಾವು ಪಡೆದು ಅದನ್ನು ಮೌಲ್ಯಾಧಾರಿತ ಕಾರ್ಯಗಳು, ನಿಸ್ವಾರ್ಥ ಕ್ರಿಯೆಗಳಲ್ಲಿ ತೋರಿಸಬಹುದು. ರಾಜ್ಯ ಅಥವಾ ರಾಷ್ಟ್ರವೆಂದರೆ ವ್ಯಕ್ತಿ ವ್ಯಕ್ತಿ ಸೇರಿ ಆಗಿರುವಂತಹದ್ದು. ಒಂದು ವೇಳೆ ನಾವು ವ್ಯಕ್ತಿಗಳಾಗಿ ನೈತಿಕ ತಳಹದಿಯ ಮೇಲೆ (ಇದು ಮಾತ್ರ ನಿರಂತರ ಮತ್ತು ಸರ್ವಕಾಲಿಕ ಸತ್ಯ) ವೈಯಕ್ತಿಕ ಜೀವನ ನಡೆಸದಿದ್ದರೆ ನಾವು ಗಾಂಧೀಜಿಯನ್ನು ಮರೆಯುತ್ತಿದ್ದೇವೆ ಮತ್ತು ದ್ರೋಹ ಬಗೆದುಕೊಳ್ಳುತ್ತಿದ್ದೇವೆ. ಅದು ಗಾಂಧಿಗೆ ಬಗೆದ ದ್ರೋಹವಲ್ಲ. ನಮಗೆ ನಾವೇ ಬಗೆದುಕೊಂಡ ದ್ರೋಹ.

**ಸಂಗ್ರಹ : ಶಿವನಕೆರೆ ಬಸವಲಿಂಗಪ್ಪ, ದಾವಣಗೆರೆ**

✱

ಗಾಂಧೀಜಿ ಸಾವಿಗೆ ಎರಡು ದಿನಗಳ ಮುಂಚೆ ನಡೆದ ಘಟನೆ. ಅವರ ನಿಕಟವರ್ತಿಗಳಾದ ರಾಜಕುಮಾರಿ ಅಮೃತ್ ಕೌರ್ ಅವರನ್ನು ಸಂಧಿಸಿ ಕೇಳಿದರು: "ಇಂದು ಪ್ರಾರ್ಥನಾ ಸಭೆಯ ಸಂದರ್ಭದಲ್ಲಿ ಏನಾದರೂ ಗದ್ದಲವಿತ್ತೆ?"

ಗಾಂಧೀಜಿ ಉತ್ತರಿಸಿದರು: "ಇಲ್ಲ, ಈ ಪ್ರಶ್ನೆ ನೀವು ನನ್ನ ಬಗ್ಗೆ ಚಿಂತಿತರಾಗಿದ್ದೀರಿ ಎಂಬುದರ ಸೂಚಕವೆ? ನಾನು ಹುಚ್ಚನೊಬ್ಬನ ಗುಂಡೇಟಿಗೆ ಬಲಿಯಾಗುವುದಾದರೆ, ನಾನು ಮುಗುಳ್ನಗುತ್ತ ಸಾಯಬೇಕು. ನನ್ನೊಳಗೆ ಸ್ವಲ್ಪವೂ ಕೋಪವಿರಬಾರದು. ನನ್ನ ಹೃದಯದಲ್ಲಿಯೂ ನಾಲಗೆ ತುದಿಯಲ್ಲಿಯೂ ದೇವರು ಇರಬೇಕು. ನೀವೊಂದು ಮಾತು ಕೊಡಬೇಕು, ನಾನು ಗುಂಡಿಗೆ ಬಲಿಯಾದರೆ ನೀವು ಕಣ್ಣೀರು ಸುರಿಸಬಾರದು."

ಅವರು ನಿರೀಕ್ಷಿಸಿದಂತೆಯೇ ಆಯಿತು. ದೇವರ ನಾಮವನ್ನು ಉಚ್ಚರಿಸುತ್ತಲೇ ಅವರು ಮೃತ್ಯುವನ್ನಪ್ಪಿದರು. ಆದರೆ ಅವರ ಕೇಳಿಕೆ ಮಾತ್ರ ಈಡೇರಲಿಲ್ಲ. ಅಂದು ಕಣ್ಣೀರು ಸುರಿಸದವರು ಎಲ್ಲೋ ಕೆಲವು ಮಂದಿ. ಅಷ್ಟೇ ಅಲ್ಲದೆ ಅನೇಕ ದಿನಗಳವರೆಗೆ ಅನೇಕರು ಕಣ್ಣೀರು ಸುರಿಸಿದರು.

*( ಪ್ರೊ. ಎನ್. ಕೃಷ್ಣಸ್ವಾಮಿಯವರ "ಮಹಾತ್ಮಾ" ಎಂಬ ಆಂಗ್ಲ ಗ್ರಂಥದಿಂದ )*